**ದಿಃ 17-08-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.**
**<u>ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ</u>**

ನಿಡಿ 2 ರಲ್ಲಿರುವ ಅಂಶಗಳು ನನ್ನ ಹಸ್ತಾಕ್ಷರದಲ್ಲಿಲ್ಲ. ಅದನ್ನು ಯಾರು ಟೈಪ್ ಮಾಡಿದರೆಂದು ನನಗೆ ಗೊತ್ತಿಲ್ಲ. ಟೈಪ್ ಮಾಡಿದ ಬಗ್ಗೆ ದಸ್ತುರ ಹಾಕಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ, ಕರಾರು ಪತ್ರವನ್ನು ನಾನೇ ಹೇಳಿ ಟೈಪ್ ಮಾಡಿಸಿದ್ದೇನೆಂದು ಬರೆಸಿಲ್ಲ. ನನ್ನ ಸಮಕ್ಷಮ ಮುಂಗಡ ಹಣವನ್ನು ಕೊಟ್ಟ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ. ನಿಡಿ 2 ರಲ್ಲಿ ಸಹಿ ಮಾಡಿರುವ ಸಾಕ್ಷಿಗಳು ಕಾಪಶಿ ಮನೆತನಕ್ಕೆ ಸೇರಿದವರೆಂದರೆ 3 ಜನ ಮಾತ್ರ ಎಂದು ಹೇಳುತ್ತಾರೆ. ನನ್ನದು ಸ್ವಂತ ಕಛೇರಿ ಇದೆ. ಖರೀದಿಗೆ ಕೊಡುವವರ ಹೆಸರು ಉತಾರದಲ್ಲಿರುತ್ತದೆಂದರೆ ನಿಜ.

ದಿಃ 08-12-1999 ರಂದು ಉತಾರದಲ್ಲಿ ಯಾರ ಹೆಸರಿತ್ತು ಎಂದು ನನಗೆ ನೆನಪಿಲ್ಲ. ನಿಡಿ 2 ರಲ್ಲಿ ಬೇರೆ ಜಮೀನು ತೆಗೆದುಕೊಂಡದ್ದಕ್ಕೆ ಸಾಲ ಇತ್ತು ಎಂದು ಬರೆಸಿಲ್ಲ. ಸದರಿ ಜಮೀನು ತೆಗೆದುಕೊಳ್ಳುವುದಕ್ಕೆ ಸಾಲ ಆಗಿತ್ತು ಎಂದೂ ಸಹ ಬರೆಸಿಲ್ಲ. ಆ ದಿನ ಉತಾರನ್ನು ಬಿಟ್ಟು ಬೇರೆ ಯಾವ ದಾಖಲೆಗಳನ್ನು ತಂದಿರಲಿಲ್ಲ. ನಾನು ರಾಯಪ್ಪ ಹೇಗೆ ಮಾಲೀಕರಾದರೆಂದು ವಿಚಾರ ಮಾಡಿಲ್ಲ. ರಾಯಪ್ಪ ಶೇರೆ ಕುಡಿಯುತ್ತಿದ್ದ ಎಂದರೆ ಗೊತ್ತಿಲ್ಲ. ಅದರ ದುರುಪಯೋಗ ಪಡೆದು ನಾನು ಕಾಪಶಿ ಮನೆದವರು ಸೇರಿ ನಿಡಿ 2 ನ್ನು ಸೃಷ್ಠಿ ಮಾಡಿದ್ದೇವೆಂದರೆ ಸುಳ್ಳು. ಸದರಿ ಪಕ್ಷದಾರರು ನನಗೆ ವೈಯಕ್ತಿಕವಾಗಿ ಪರಿಚಯವಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೆಲ್ಲ ಸುಳ್ಳು ಎಂದರೆ ಸರಿಯಲ್ಲ. ನಿಡಿ 2 ನ್ನು ಬರೆಯಲು ರಾಯಪ್ಪ ಮಾಹಿತಿ ಕೊಟ್ಟರೆಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ